# 32 ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ, ಬೆಂಗಳೂರು

## ಸಿಸಿ ನಂಃ 31209/2022

**CW.1 : PW.1**

| | | |
|---|---|---|
| **ಸಾಕ್ಷಿದಾರರ ಹೆಸರು** | : | ಮಟ್ಟಮಲ್ಲಯ್ಯ ಎಸ್ |
| **ತಂದೆಯ ಹೆಸರು** | : | ಶಿವಮಲ್ಲಯ್ಯ |
| **ವಯಸ್ಸು** | : | 49 ವರ್ಷ |
| **ಉದ್ಯೋಗ** | : | ಎ.ಎಸ್.ಐ ಶೇಷಾದ್ರಿಪುರಂ |
| **ವಾಸಸ್ಥಳ** | : | ಗೊಲ್ಲರಹಟ್ಟಿ ಬೆಂಗಳೂರು. |

**ಸಾಕ್ಷಿಯನ್ನು ದಿನಾಂಕ 27/04/2023 ರಂದು ಕರೆಸಿ ಪ್ರತಿಜ್ಞಾ ವಿಧಿ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-**

1. ನಾನು 18.05.2022 ರಿಂದ ಇಲ್ಲಿಯವರೆಗೆ ಶೇಷಾದ್ರಿಪುರಂ ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಎಂದು ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

2. ದಿನಾಂಕ 27.07.2022 ರಂದು ನಾನು ಠಾಣೆಯಲ್ಲಿದ್ದಾಗ ರಾತ್ರಿ 8-30 ರ ಸಮಯದಲ್ಲಿ ಠಾಣಾಧಿಕಾರಿ ನನಗೆ ನೈಟ್ ರೌಂಡ್ಸ್ ಕರ್ತವ್ಯಕ್ಕೆ ನೇಮಿಸಿದ್ದು ಅದರಂತೆ ನಾನು ಹೊಯ್ಸಳ 06 ನಲ್ಲಿ ಚಾಲಕನಾದ ಚಾಸಾ-7 ಮತ್ತು ಚಾಸಾ-6 ರವರ ಜೊತೆ ಪ್ಲಾಟ್ ಫಾರಂ ರಸ್ತೆಯಲ್ಲಿ ಗಸ್ತಿನಲ್ಲಿ ಇರುವಾಗಿ ಜಿ.ಎಸ್.ಬಿ ಜಂಕ್ಷನ್ ನಲ್ಲಿ ಮಳೆ ಜೋರಾದ ಕಾರಣ ಹೊಯ್ಸಳವನ್ನು ಎಡಭಾಗದಲ್ಲಿ ನಿಲ್ಲಿಸಿಕೊಳ್ಳಿ ನಂತರ ಹೋಗೋಣ ಎಂದು ಚಾಲಕನಿಗೆ ಹೇಳಿದ್ದು ಚಾಲಕ ಜೆ.ಎಸ್.ಬಿ ಜಂಕ್ಷನ್ ನಲ್ಲಿ ಹೊಯ್ಸಳ ವಾಹನವನ್ನು ಎಡಭಾಗಕ್ಕೆ ತೆಗೆದುಕೊಳ್ಳುತ್ತಿದ್ದಾಗ ಅಷ್ಟರಲ್ಲಿ ಎಡಭಾಗದಲ್ಲಿ ಒಂದು ಆಟೋ ರಿಕ್ಷಾ ಬಂದಾಗ ಹೊಯ್ಸಳ

ವಾಹನ ನಿಲ್ಲಿಸಿಕೊಂಡೆನು ಅಷ್ಟರಲ್ಲಿ majestic ಕಡೆಯಿಂದ ಬರುವ ವಾಹನಗಳಿಗೆ ರೆಡ್ ಸಿಗ್ನಲ್ ಇದ್ದದ್ದರಿಂದ ಕೆಲವು ವಾಹನ ಸವಾರರು ಗ್ರೀನ್ ಸಿಗ್ನಲ್ ಗಾಗಿ ಕಾಯುತ್ತಿದ್ದರು, ಆ ಸಮಯದಲ್ಲಿ ದ್ವಿಚಕ್ರ ವಾಹನ ಕೆ.02 ಕೆ.ಎಮ್.6952 ರ ಸವಾರ ಏರು ಧ್ವನಿಯಲ್ಲಿ ಎ ಪೊಲೀಸ್ ಎಕೆ ಒನ್ ವೇನಲ್ಲಿ ಹೋಗುತ್ತಿದ್ದೀಯಾ ಎಂದು ಕೂಗಿದ್ದು ಆಗ ಚಾಸಾ-7 ರವರು ಇಲ್ಲ ನಾವು ಒನ್ ವೇ ನಲ್ಲಿ ಹೋಗುತ್ತಿಲ್ಲ ಇಲ್ಲೇ ಔಟ್ ಪೋಸ್ಟ್ ಚೌಕಿ ಇರುವುದರಿಂದ ಹೊಯ್ಸಳವನ್ನು ಇಲ್ಲೆ ನಿಲ್ಲಿಸಿಕೊಳ್ಳುತ್ತೇವೆ ಮಳೆ ನಿಂತ ನಂತರ ಹೋಗುತ್ತೇವೆ ಎಂದು ಹೇಳಿದರು. ಆಗ ಮೋಟಾರ್ ಸೈಕಲ್ ಸವಾರ ಕೈ ಸನ್ನೆ ಮುಖಾಂತರ ಹೇ ಹೋಗೋ ಎಂದು ಹೇಳಿದ, ಆಗ ನಾನು ಹೊಯ್ಸಳ ವಾಹನದಿಂದ ಇಳಿದು ನಾನು ಆತನ ಬಳಿ ಒನ್ ವೇ ನಲ್ಲಿ ಹೋಗುವುದಿಲ್ಲ ಏಕೆ ಪೊಲೀಸಿನವರ ಜೊತೆ ಈ ರೀತಿ ವರ್ತಿಸುತ್ತಿದ್ದೀಯಾ ಮಳೆನಿಂತ ನಂತರ ಹೋಗುತ್ತೇವೆ ಎಂದು ಹೇಳಿದರೂ ಸಹ ಸವಾರ ನನ್ನ ಜೊತೆ ಏರು ಧ್ವನಿಯಲ್ಲಿ ನಿನಗೆ ನಾನು ಏನು ಮಾಡುತ್ತೇನೆ ನೋಡು ಎಂದು ಏಕಾಏಕಿ ನನ್ನ ಬಲ ಕಾಲಿನ ಪಾದದ ಮೇಲೆ ತನ್ನ ಮೊಟಾರ್ ಸೈಕಲ್ ಅನ್ನು ಹತ್ತಿಸಿದ್ದು ಇದರಿಂದ ನನ್ನ ಬಲ ಕಾಲಿನ ಮೊಣ ಕಾಲಿಗೆ ಗಾಯ ಮತ್ತು ನೋವು ಉಂಟಾಗಿರುತ್ತದೆ. ಆ ಸಮಯದಲ್ಲಿ ಚಾಸಾ-6 ಮತ್ತು 7 ರವರು ನನ್ನ ಸಹಾಯಕ್ಕೆ ಬಂದಿರುತ್ತಾರೆ. ಆ ಸಮಯದಲ್ಲಿಯೂ ಸಹ ಆರೋಪಿ ತನ್ನ ಮೊಟಾರ್ ಸೈಕಲ್ ಅನ್ನು ನನ್ನ ಮೇಲೆ ಹರಿಸಲು ಬಂದಿದ್ದು, ಆಗ ನಾನು ಪಕ್ಕಕ್ಕೆ ಸರಿದುಕೊಂಡಿರುತ್ತೇನೆ.

3. ನಂತರ ಆರೋಪಿಯ ದ್ವಿಚಕ್ರ ವಾಹನವನ್ನು ಪಕ್ಕಕ್ಕೆ ನಿಲ್ಲಿಸಿ ಆರೋಪಿಯನ್ನು ಹೊಯ್ಸಳದಲ್ಲಿ ಕೂರಿಸಿಕೊಂಡು ಹೋಗುತ್ತಿದ್ದಾಗ ಆರೋಪಿ ಏರು ಧ್ವನಿಯಲ್ಲಿ ನಾನು ಯಾರು ನಿನಗೆ ಗೊತ್ತಾ, ನಿನಗೆ ಏನು ಮಾಡುತ್ತೇನೆ ನೋಡು ಎಂದು ಚಾಸಾ-6 ರವರಿಗೆ ಏರು ಧ್ವನಿಯಲ್ಲಿ ವಾಗ್ವಾದ ಮಾಡುತ್ತಿದ್ದು, ಆಗ ನಾನು ಸವಾರನಿಗೆ ಈ ರೀತಿ ಮಾತನಾಡುವುದು ಸರಿಯಲ್ಲ ಎಂದು ಹೇಳಿದರೂ ಸಹ ಆತ ನಾನು ಇದೇ ರೀತಿ ಮಾತನಾಡುವುದು ನೀನು ಏನು ಮಾಡಿಕೊಳ್ಳುತ್ತೀಯಾ ಮಾಡಿಕೋ ಎಂದು ನನಗೆ ಹೇಳಿದರು, ಆ ಸಮಯದಲ್ಲಿ ಆರೋಪಿ ಮಧ್ಯ ಪಾನ ಮಾಡಿರುವ ಬಗ್ಗೆ ನಮಗೆ ಮೇಲ್ನೋಟಕ್ಕೆ ಕಂಡು ಬಂದಿದ್ದು ಆತನನ್ನು ಠಾಣೆಗೆ ಕರೆದುಕೊಂಡು ಹೋಗಿ ಆರೋಪಿಗೆ ತನ್ನ ಹೆಸರನ್ನು ಕೇಳಲಾಗಿ ಆತ ತನ್ನ ಹೆಸರು ಮಹವೀರ್

ಹೊಸೂರ್ ಎಂದು ತಿಳಿಸಿದ್ದು ನಂತರ ಠಾಣಾಧಿಕಾರಿಗಳಿಗೆ ಹಾಗೂ ಹಿರಿಯ ಅಧಿಕಾರಿಗಳಿಗೆ ನಡೆದ ಘಟನೆಯ ಬಗ್ಗೆ ತಿಳಿಸಿರುತ್ತೇನೆ.

4. ತದನಂತರ ನಮ್ಮ ಠಾಣಾಧಿಕಾರಿ ಆರೋಪಿಯನ್ನು ಮಧ್ಯಪಾನ ಮಾಡಿರುವ ಬಗ್ಗೆ ಖಚಿತ ಪಡಿಸಿಕೊಳ್ಳಲು ಹಾಗೂ ನಾನು ಚಿಕಿತ್ಸೆಯನ್ನು ಪಡೆಯಲು ವೈದ್ಯರ ಬಳಿ ಹೋಗುವಂತೆ ಸೂಚಿಸಿದ್ದು ಆ ಮೇರೆಗೆ ನಾನು ಆರೋಪಿಯನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಅಲ್ಲಿಯ ವೈದ್ಯರು ತಪಾಸಣೆ ಮಾಡಿ ಆತ ಮಧ್ಯ ಪಾನ ಮಾಡಿರುವುದಾಗಿ ದೃಢ ಪಡಿಸಿರುತ್ತಾರೆ, ನಾನು ಸಹ ವೈದ್ಯರ ಬಳಿ ಚಿಕಿತ್ಸೆಯನ್ನು ಪಡೆದುಕೊಂಡು ಬಂದು ನನ್ನ ಕರ್ತವ್ಯಕ್ಕೆ ಅಡ್ಡಿ ಪಡಿಸಿದ ಆರೋಪಿಯ ವಿರುದ್ಧ ದೂರು ದಾಖಲು ಮಾಡಿರುತ್ತೇನೆ. ಸಾಕ್ಷಿ ದೂರನ್ನು ಅನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.1** ಎಂದು, ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು **ನಿಪಿ.1(ಎ)** ಎಂದು ಗುರುತಿಸಲಾಯಿತು. ಘಟನೆ ನಡೆದ ಸಮಯ ರಾತ್ರಿ 9-45 ರಿಂದ 10.00 ರವರೆಗೆ ಆಗಿರುತ್ತದೆ.

5. ದಿನಾಂಕ 28.07.2022 ರಂದು ನನ್ನ ಸಮಕ್ಷಮ ಪೊಲೀಸಿನವರು ಮಹಜರ್ ಕ್ರಮ ಅನುಸರಿಸಿರುತ್ತಾರೆ ಮಹಜರ್ ಅನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು **ನಿಪಿ.2** ಎಂದು, ಸಾಕ್ಷಿಯ ಸಹಿಯನ್ನು **ನಿಪಿ.2(ಎ)** ಎಂದು ಗುರುತಿಸಲಾಯಿತು.

**ಪಾಟೀ ಸವಾಲು :- ಶ್ರೀ.ವಿ.ಎನ್.ಎಸ್ . ಆರೋಪಿ ಪರ ವಕೀಲರಿಂದಃ-**

6. ನಾನು ದ್ವಿಚಕ್ರವಾಹನವಾದ ಚೀತಾ ವಾಹನದಲ್ಲಿ ಗಸ್ತಿನಲ್ಲಿ ಇದ್ದೆನು. ಘಟನೆ ರಾತ್ರಿ 9-50 ಕ್ಕೆ ನಡೆದಿರುತ್ತದೆ. ದೂರಿನಲ್ಲಿ ಘಟನೆ ನಡೆದ ಬಗ್ಗೆ ಸಮಯವನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಘಟನೆ ನಡೆದ ನಂತರ ಸ್ಥಳದಿಂದ ಠಾಣೆಗೆ 9-55 ಕ್ಕೆ ಹೋಗಿರುತ್ತೇನೆ. ಘಟನಾ ಸ್ಥಳಕ್ಕೂ ಹಾಗೂ ಠಾಣೆಗೂ 500 ಮೀಟರ್ ಅಂತರ ಇರುತ್ತದೆ. ಠಾಣೆಗೆ ಹೋದ ನಂತರ ನಡೆದ ಘಟನೆಯನ್ನು ಠಾಣಾಧಿಕಾರಿಯಾದ ಹೆಚ್.ಸಿ 10834 ರವರಿಗೆ ತಿಳಿಸಿರುತ್ತೇನೆ. ನಾನು ಆಸ್ಪತ್ರೆಗೆ ರಾತ್ರಿ 10-20 ಕ್ಕೆ ಹೋಗಿರುತ್ತೇನೆ. ವೈದ್ಯರ ಬಳಿ ನಾನು ಚಿಕಿತ್ಸೆಗಾಗಿ ಮತ್ತು ಆರೋಪಿಯ ಕುಡಿತದ ಬಗ್ಗೆ ಪರೀಕ್ಷಿಸಲು ಆರೋಪಿ ಯನ್ನು ಕರೆದುಕೊಂಡು ಹೋಗಿರುತ್ತೇನೆ. ನನ್ನ ಜೊತೆ ಆಸ್ಪತ್ರೆಗೆ ಹೋಗುವ ಸಮಯದಲ್ಲಿ

ನನ್ನ ಜೊತೆ ಇದ್ದ ಸಿಬ್ಬಂದಿಯ ಹೆಸರು ನನಗೆ ನೆನಪಿರುವುದಿಲ್ಲ. ನನ್ನನ್ನು ಸೇರಿಸಿ 4 ಜನ ಸಿಬ್ಬಂದಿಗಳು ಹೋಗಿರುತ್ತೇವೆ. ನನಗೆ ಆಸ್ಪತ್ರೆಯಲ್ಲಿ 5 ನಿಮಿಷ ಚಿಕಿತ್ಸೆ ನೀಡಿ ಕಳುಹಿಸಿರುತ್ತಾರೆ. ವೈದ್ಯರ ಬಳಿ ಘಟನೆಯ ಸಂಪೂರ್ಣ ವಿವರ ಹಾಗೂ ಸಮಯವನ್ನು ಸಹ ತಿಳಿಸಿರುತ್ತೇನೆ. ನನ್ನ ಹಾಗೂ ಆರೋಪಿಯನ್ನು ಪರಿಶೀಲಿಸಿದ ನಂತರ ಆಸ್ಪತ್ರೆಯಿಂದ ರಾತ್ರಿ 10-45 ಕ್ಕೆ ಹೊರಟಿರುತ್ತೇವೆ. ನಮ್ಮ ಠಾಣಾಧಿಕಾರಿ ಆರೋಪಿಯನ್ನು ಆರೋಪಿತರ ಕುಡಿತದ ಬಗ್ಗೆ ಪರೀಕ್ಷಿಸುವಂತೆ ವೈದ್ಯರಿಗೆ ಕೋರಿಕೆಯನ್ನು ನೀಡಿರುತ್ತಾರಾ ಎಂದರೆ ಸಾಕ್ಷಿ ನೀಡಿರುತ್ತಾರೆ ಎಂದು ನುಡಿಯುತ್ತಾರೆ.

7. ನಾವು ಗಸ್ತಿನಲ್ಲಿ ಇದ್ದಾಗ ಯಾವುದಾದರೂ ಘಟನೆ ಯಾದಲ್ಲಿ ಘಟನೆಯನ್ನು ನಮ್ಮ ಮೇಲಾಧಿಕಾರಿಗಳಿಗೆ ತಿಳಿಸುತ್ತೇವೆ. ಸ್ಥಳದಿಂದ ಘಟನೆಯ ಬಗ್ಗೆ ನೀವು ನಿಮ್ಮ ಠಾಣಾಧಿಕಾರಿ ಮತ್ತು ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿರುವುದಿಲ್ಲವೆಂದರೆ ಸರಿ. ಘಟನೆ ನಡೆದ ದಿನದಂದು ವಾಹನದಲ್ಲಿ ಒಬ್ಬರು ಹಿಂಬದಿ ಸವಾರರು ಇದ್ದರು. ಹಿಂಬದಿ ಸವಾರನ ಬಗ್ಗೆ ನಿಮ್ಮ ದೂರಿನಲ್ಲಿ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಆರೋಪಿ ಸ್ಥಳದಲ್ಲಿ ಇರದೇಇದ್ದ ಕಾರಣ ಘಟನೆಯ ಬಗ್ಗೆ ನಿಮ್ಮ ಮೇಲಾಧಿಕಾರಿಗಳಿಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಸ್ಥಳದಲ್ಲಿ ಆರೋಪಿತ ನನ್ನ ಜೊತೆ ಏರು ಧ್ವನಿಯಲ್ಲಿ ಮಾತನಾಡುತ್ತಿದ್ದಾಗ ಆತ ಕುಡಿದಿರುವ ಬಗ್ಗೆ ಸಂಶಯ ಬಂದಿರುತ್ತದೆ.

8. ಘಟನೆಯ ಸ್ಥಳದಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಘಟನೆ ನಡೆದ ಸ್ಥಳದಲ್ಲಿ ಇಬ್ಬರು ಸಾರ್ವಜನಿಕರು ಇದ್ದರು. ಅವರುಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅವರುಗಳು ನಮ್ಮ ಜೊತೆ ಠಾಣೆಗೆ ಬಂದಿರುವುದಿಲ್ಲ. ನಿಪಿ-2 ದಾಖಲೆ ಬರೆಯವ ಸಮಯದಲ್ಲಿ ಘಟನೆ ಮತ್ತು ಸ್ಥಳದ ಬಗ್ಗೆ ನಾನೇ ಹೇಳಿರುತ್ತೇನೆ. ನಿಪಿ-2 ರಲ್ಲಿ ನಮೂದು ಆಗಿರುವ ಸಂಗತಿಳು ಸತ್ಯದಿಂದ ಕೂಡಿರುತ್ತದೆ. ಸ್ಥಳದಲ್ಲಿ ಸ್ಥಳ ನಕ್ಷೆ ತಯಾರಿಸಿರುವುದಿಲ್ಲ. ನಿಪಿ-2 ದಾಖಲೆಯಾಗುವ ಸಮಯದಲ್ಲಿ ನಮ್ಮ ಠಾಣೆಯ ರೈಟರ್ ಹಾಗೂ ಚಾಸಾ-12 ತನಿಖಾಧಿಕಾರಿ ಇದ್ದರು. ನಿಪಿ-2 ರ ಸಮಯದಲ್ಲಿ ಚಾಸಾ-8 ರವರು ಇದ್ದರು, ಇನ್ನೊಬ್ಬರ ಹೆಸರು ಗೊತ್ತಿರುವುದಿಲ್ಲ. ಚಾಸಾ-8 ರವರು ನಿಮಗೆ

ಮೊದಲಿನಿಂದಲೂ ಪರಿಚಯ ಎಂದರೆ ಸರಿಯಲ್ಲ. ನಿಪಿ-2 ದಾಖಲಾತಿಯನ್ನು ನಮ್ಮ ಠಾಣೆಯ ರೈಟರ್ ಆದ ಯೋಗನಾಥ್ ರವರು ಬರೆದಿರುತ್ತಾರೆ. ನಿಪಿ-2 ದಾಖಲಾತಿಯಲ್ಲಿ ಯಾರು ಬರೆದಿರುತ್ತಾರೆ ಎಂಬುದರ ಬ ಗ್ಗೆ ನಮೂದು ಇರುತ್ತದೆ.

9. ಘಟನೆ ನಡೆಯುವ ಪೂರ್ವದಲ್ಲಿ ನಮ್ಮ ಹೊಯ್ಸಳದಲ್ಲಿ ನನ್ನನ್ನು ಸೇರಿಸಿ 3 ಜನ ಇದ್ದರು. ಘಟನೆ ನಡೆದ ಸಮಯದಲ್ಲಿ ಮೊದಲು ಕಾರಿನಿಂದ ನಾನೇ ಇಳಿದಿರುತ್ತೆನೆ. ಆ ಸಮಯದಲ್ಲಿ ಉಳಿದ ಇಬ್ಬರು ಗಾಡಿಯಲ್ಲಿ ಕುಳಿತ್ತಿದ್ದರು. ಘಟನೆ ನಡೆಯುವ ದಿನದಂದು ಮಳೆ ಬರುತ್ತಿತ್ತು ಆದರೆ ಘಟನೆ ನಡೆದ ಸಮಯದಲ್ಲಿ ಮಳೆ ಬಂದು ನಿಂತು ಹೋಗಿತ್ತು. ನನ್ನ ಜೊತೆ ಗಸ್ತಿನಲ್ಲಿ ಗಜಾನನ ದಾನೊಳೆ ಇದ್ದರು. ಘಟನೆ ನಡೆದ ಸಮಯದಲ್ಲಿ ನಿಮ್ಮ ಜೊತೆ ಕರ್ತವಕ್ಕೆ ನಿಯೋಜಿಸಿದವರು ಇರಲಿಲ್ಲ ಎಂದರೆ ಸರಿ. ಮಳೆ ಬಂದಾಗ ನೀವು ಗಸ್ತಿನಲ್ಲಿ ಇದ್ದಾಗ ಮಳೆ ಬಂದ ಕಾರಣ ನೀವು ಚಲಿಸುತ್ತಿದ್ದ ದ್ವಿಚಕ್ರ ವಾಹನದಿಂದ ನಿವೇ ಬಿದ್ದು ಗಾಯ ಮಾಡಿಕೊಂಡು ಆಸ್ಪತ್ರೆಗೆ ಹೋಗಲು ಸ್ಥಳಕ್ಕೆ ಬಂದ ಹೊಯ್ಸಳದಲ್ಲಿ ಒನ್ ವೇ ನಲ್ಲಿ ಹೋಗುತ್ತಿದ್ದು ಮಳೆಬರುತ್ತಿದ್ದ ಕಾರಣ ಮಳೆಗೆ ರಕ್ಷಣೆ ಕೋರಿ ರಸ್ತೆ ಬದಿಯಲ್ಲಿ ನಿಂತಿದ್ದ ಸಾರ್ವಜನಿಕನಾಗಿ ಆರೋಪಿ ನಿಮ್ಮನ್ನು ಪೊಲೀಸ್ ಸಿಬ್ಬಂದಿಯಾಗಿ ನೀವು ಒನ್ ವೇ ನಲ್ಲಿ ಹೋಗಿ ಕಾನೂನು ಉಲ್ಲಂಘನೆ ಮಾಡುತ್ತಿದ್ದೀರಾ ಎಂದು ಸಾರ್ವಜನಿಕರ ಮುಂದೆ ಕೇಳಿದ್ದರಿಂದ ನಿಮಗೆ ಅವಮಾನವಾಗಿ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೀರಿ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ನಮೂದು ಮಾಡಿರುವ ರೀತಿ ಆರೋಪಿ ಯಾವುದೇ ತಪ್ಪು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-2 ದಾಖಲಾತಿಯನ್ನು ಠಾಣೆಯಲ್ಲಿ ಬರೆದಿರಲಾಗಿರುತ್ತದೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓ ಹೇ ಕೆ ಸ ಇ**

**(ಲತಾ.ಜೆ),**

**32 ನೇ ಎ.ಸಿ.ಎಂ.ಎಂ. ಬೆಂಗಳೂರು.**